

ಶ್ರೀಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ
ದಕ್ಷಿಣಾಮ್ನಾಯ ಶ್ರೀ ಶಾರದಾಪೀಠ, ಶೃಂಗೇರಿ



ಶೃಂಗೇರಿ ಉತ್ಸವ ಸಮಿತಿ

ಕರ್ನಾಟಕ ಘನಸರ್ಕಾರದ ಸಹಯೋಗದೊಂದಿಗೆ

# ಶೃಂಗೇರಿ ಉತ್ಸವ

## ಮಾರ್ಚ್ 13 ರಿಂದ 19, 2022







**ಶ್ರೀಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ**
**ದಕ್ಷಿಣಾಮ್ನಾಯ ಶ್ರೀ ಶಾರದಾಪೀಠ, ಶೃಂಗೇರಿ**

# ಶೃಂಗೇರಿ ಉತ್ಸವ ಸಮಿತಿ

ಶ್ರೀಮಠವು ಸನಾತನಧರ್ಮ ಪ್ರಸಾರ ಹಾಗೂ ರಕ್ಷಣೆಯೊಂದಿಗೆ ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯ ಉಳಿವಿಗಾಗಿ ಶ್ರಮಿಸುತ್ತಿರುವ ವಿಷಯ ಸರ್ವರಿಗೂ ವೇದ್ಯವಾಗಿದೆ. ಸಾಮಾಜಿಕ, ಶೈಕ್ಷಣಿಕ, ಆರೋಗ್ಯ ಕ್ಷೇತ್ರಗಳಲ್ಲಿ ಅನೇಕ ಚಟುವಟಿಕೆಗಳನ್ನು ಕೈಗೊಂಡಿರುವಂತೆ ನಮ್ಮ ಭಾರತೀಯ ಶಾಸ್ತ್ರೀಯ ಸಂಗೀತ ಕ್ಷೇತ್ರದಲ್ಲೂ ತನ್ನ ಕೊಡುಗೆಯನ್ನು ಕಾಲಕಾಲಕ್ಕೆ ನೀಡುತ್ತಾ, ಸಂಗೀತ ಕ್ಷೇತ್ರದಲ್ಲಿ ಸಾಧನೆಗೈದ ಅನೇಕ ಸಂಗೀತಜ್ಞರನ್ನು ಗೌರವಿಸಿ ಸಮ್ಮಾನಿಸುತ್ತಿದೆ. ತನ್ನಲ್ಲಿ ನಡೆಯುವ ಬೃಹತ್ ಕಾರ್ಯಕ್ರಮಗಳಲ್ಲಿ ಗಾಯನ, ವಾದ್ಯ, ನೃತ್ಯನಾಟಕ ಇತ್ಯಾದಿ ಸಾಂಸ್ಕೃತಿಕ ಚಟುವಟಿಕೆಗಳಿಗೆ ಆದ್ಯತೆಯನ್ನು ಕೊಡುವುದರ ಮೂಲಕ ಕಲೆಗೆ ಮತ್ತು ಕಲಾವಿದರಿಗೆ ಪ್ರೋತ್ಸಾಹವನ್ನು ಕೊಡುತ್ತಿದೆ.

ಜಗದ್ಗುರು ಶಂಕರಾಚಾರ್ಯ **ಶ್ರೀಶ್ರೀಶ್ರೀ ಭಾರತೀತೀರ್ಥ ಮಹಾ**ಸನ್ನಿಧಾನಂಗಳವರ ಮತ್ತು ಅವರ ಕರಕಮಲ ಸಂಜಾತರಾದ **ಜಗದ್ಗುರು ಶ್ರೀಶ್ರೀ ವಿಧುಶೇಖರಭಾರತೀ** ಸನ್ನಿಧಾನಂಗಳವರ ಅನುಗ್ರಹದೊಂದಿಗೆ ಶೃಂಗೇರಿಯ ನಾಗರಿಕರು ಪ್ರಪ್ರಥಮ ಬಾರಿಗೆ **"ಶೃಂಗೇರಿ ಉತ್ಸವ"**ವನ್ನು ಶ್ರೀಮಠದಲ್ಲಿ ಆಯೋಜಿಸುತ್ತಿದ್ದಾರೆ.

ಶ್ರೀಮಠದಲ್ಲಿ ಆಯೋಜನೆಗೊಂಡಿರುವ ಶೃಂಗೇರಿ ಉತ್ಸವವು ಭವ್ಯವಾದ ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸುವ ಉತ್ಸವವಾಗಿದ್ದು, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಕಲಾವಿದರ ಸಂಗಮವಾಗಿದೆ. ಸಂಗೀತ, ನೃತ್ಯ ಹಾಗೂ ನಾಟಕ ಕ್ಷೇತ್ರಗಳ ಅನೇಕ ಖ್ಯಾತನಾಮರು ಈ ಉತ್ಸವದಲ್ಲಿ ಪಾಲ್ಗೊಂಡು ಸಂಗೀತ ಸುಧೆಯನ್ನು ಹರಿಸಲಿದ್ದಾರೆ.

ಉತ್ಸವವು ಕರ್ನಾಟಕ ಸರ್ಕಾರದ ಬೆಂಬಲದೊಂದಿಗೆ **ಮಾರ್ಚ್** 13 ರಿಂದ 19 ರ ವರೆಗೆ ಏಳುದಿನಗಳ ಕಾಲ ಶೃಂಗೇರಿಯ ಶ್ರೀಮಠದಲ್ಲಿ ನಡೆಯಲಿದ್ದು, ಕ್ಷೇತ್ರದ ಹಾಗೂ ಸುತ್ತಮುತ್ತಲಿನ ಜನತೆಗೆ ಇದು ಒಂದು ಸುವರ್ಣ ಅವಕಾಶವಾಗಿದೆ. ಮೊದಲಬಾರಿಗೆ ಶೃಂಗೇರಿಯಲ್ಲಿ ನಡೆಯುತ್ತಿರುವ ಈ ಉತ್ಸವಕ್ಕೆ ತಾವೆಲ್ಲ ಆಗಮಿಸಿ, ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿಸುತ್ತೇನೆ.

ಶೃಂಗೇರಿ
1.3.2022

ಗುರುಸೇವಾಧುರೀಣ
ಪದ್ಮಶ್ರೀ ಪುರಸ್ಕೃತ
ಡಾ. ವಿ ಆರ್ ಗೌರೀಶಂಕರ್

# ಶೃಂಗೇರಿ ಉತ್ಸವ

# ಸಾಂಸ್ಕೃತಿಕ ಕಾರ್ಯಕ್ರಮಗಳು

## 13-03-2022 ರಿಂದ 19-03-2022

### ಪ್ರತಿ ದಿನ ಸಂಜೆ 6.00 ರಿಂದ 8.00 ಗಂ



**ಮಾರ್ಚ್ 13, 2022 - ಹಾಡುಗಾರಿಕೆ**

ಖ್ಯಾತ ಗಾಯಕರು, ವಿದ್ವಾನ್ ಶ್ರೀ ವಿಜಯ್ ಪ್ರಕಾಶ್



**ಮಾರ್ಚ್ 14, 2022 - ಅದ್ವೈತ ಅನುಸಂಧಾನಂ**

ಶ್ರೀ ಶಂಕರ ಭಗವತ್ಪಾದರ ಪ್ರಪ್ರಥಮ ರಂಗ ರೂಪಕ

**ಅಸ್ತಿತ್ವಂ ಥಿಯೇಟರ್ ಫೌಂಡೇಷನ್ ಕಲಾವಿದರು**



**ಮಾರ್ಚ್ 15, 2022 - ಹಾಡುಗಾರಿಕೆ**

ಪ್ರಸಿದ್ಧ ಗಾಯಕರು, **ವಿದುಷಿ ಕುಮಾರಿ ಅನುರಾಧಾ ಭಟ್**



**ಮಾರ್ಚ್ 16, 2022 - ಹಾಡುಗಾರಿಕೆ**

ಪ್ರಸಿದ್ಧ ಗಾಯಕರು ಪದ್ಮಶ್ರೀ ಪುರಸ್ಕೃತರು

**ವಿದುಷಿ ಶ್ರೀಮತಿ ಅನುರಾಧಾ ಪೌಡ್ವಾಲ್**



**ಮಾರ್ಚ್ 17, 2022 - ಕೊಳಲು ವಾದನ - ನಾದ ಮತ್ತು ಭಾವ**

ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರು **ವಿದ್ವಾನ್ ಶ್ರೀ ಬಾಪು ಪದ್ಮನಾಭ**



**ಮಾರ್ಚ್ 18, 2022 - ವಯೋಲಿನ್ ವಾದನ**

ಅಂತರರಾಷ್ಟ್ರೀಯ ವಯೋಲಿನ್ ವಾದಕರು,
ಪದ್ಮಭೂಷಣ **ವಿದ್ವಾನ್ ಶ್ರೀ ಡಾ. ಎಲ್ ಸುಬ್ರಹ್ಮಣ್ಯಂ**
**ವಿದ್ವಾನ್ ಶ್ರೀ ಅಂಬಿ ಸುಬ್ರಹ್ಮಣ್ಯಂ**



**ಮಾರ್ಚ್ 19, 2022 - ನೃತ್ಯ ನಾಟಕ - ಶ್ರೀ ರಾಮ ಪ್ರತೀಕ್ಷ**

**ನಾಡಿನ ಹೆಮ್ಮೆಯ ಪ್ರಭಾತ ಕಲಾವಿದರು**

ವಿ.ಸೂ. ಕೋವಿಡ್ 19 ರ ನಿಯಮಗಳನ್ನು ಪಾಲಿಸುವುದು.

